

## ನನ್ನ ತಂದೆ ಮತ್ತು ರೇಡಿಯೊ

ಸಿನಿಮಾ, ದೂರದರ್ಶನ ಮತ್ತು ಮೊಬೈಲ್‌ಗಳ ಅಬ್ಬರದಲ್ಲಿಯೂ, ಆಕಾಶವಾಣಿಗಳು ತಮ್ಮದೇ ಆದ ಶೋತೃ ವರ್ಗವನ್ನು ಹೊಂದಿದ್ದು ಪ್ರಸಾರ ರಂಗದಲ್ಲಿ ಗುಪ್ತಗಾಮಿನಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಧಾನಿಯವರ 'ಮನ್ ಕೀ ಬಾತ್' (ಮನದಾಳದ ಮಾತು) ಕಾರ್ಯಕ್ರಮ ಬಂದ ಮೇಲೆ ರೇಡಿಯೊ ಇನ್ನಷ್ಟು ಜನಪ್ರಿಯವಾಗಿದೆ.

ಈ ಚಿತ್ರದಲ್ಲಿ ಕಾಣುತ್ತಿರುವ ರೇಡಿಯೊ ನಮ್ಮ ಮನೆಯಲ್ಲಿದೆ. ನಮ್ಮ ತಂದೆಯವರು 15/9/1970 ರಂದು ಇದನ್ನು ಖರೀದಿಸಿದ್ದು, ಇಂದಿನವರೆಗೂ ಯಾವುದೇ ತೊಂದರೆ ಅಡಚಣೆ ಇಲ್ಲದೇ ಇದು ಕಾರ್ಯನಿರ್ವಹಿಸುತ್ತಿದೆ. ಸುಮಾರು 49 ವರ್ಷಗಳಿಂದಲೂ ನಮ್ಮ ಮನೆಯಲ್ಲಿ ಚರಾಸ್ತಿಯಾಗಿ ಇದೆ. ವಾಲ್ವ ರೇಡಿಯೊ ಆದರೂ ಕೂಡ ಡಿಜಿಟಲ್ ರೇಡಿಯೊದಷ್ಟೇ ಸುಮಧುರವಾಗಿ ಆಕಾಶವಾಣಿಯಿಂದ ಕಾರ್ಯಕ್ರಮಗಳನ್ನು ಕೇಳಿಸುತ್ತಿದೆ. ಈಗ ನಮ್ಮ ತಂದೆಯವರು ಈಗ ಇಲ್ಲ. ಆದರೆ ಅವರು ತಂದಿರುವ ಈ ರೇಡಿಯೊ ಅವರ ನೆನಪನ್ನು ಸದಾ ಹಸಿರಾಗಿಟ್ಟಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಕಲ್ಲಿನ ಪಾತ್ರೆ

ಪುರಾತನ ಕಾಲದಿಂದಲೂ ಅತಿ ಬಾಳಿಕೆಯಲ್ಲಿದ್ದ ಪಾತ್ರೆಗಳಲ್ಲಿ ಕಲ್ಲಿನ ಪಾತ್ರೆಗಳು ಒಂದು. ಇಂದು ಅಲ್ಲೋ ಇಲ್ಲೋ ಎಂಬಂತೆ ಒಂದೊಂದನ್ನು ಕಡೆಯುವ ಕಲ್ಲು ಮತ್ತು ಬೀಸುವ ಕಲ್ಲುಗಳನ್ನು ಕಾಣಬಹುದು. ಇಂತಹ ಪಾತ್ರೆಗಳ ಜೊತೆಗೆ ನೀರು ಸಂಗ್ರಹಿಸಿಡುವ ಈ ಪಾತ್ರೆ ಕಂಡು ಬಂದಿದ್ದು ತಲಕಾಡಿನ ವೈದ್ಯನಾಥೇಶ್ವರ ದೇವಾಲಯದಲ್ಲಿ. ಪುರಾತನ ಕಾಲದ ಶೈಲಿಗಳು ಇಂದು ಆಧುನಿಕತೆಯ ಹೆಸರಿನಲ್ಲಿ ಮಾಯವಾಗುತ್ತಿರುವುದು ಮಾತ್ರ ವಿಪರ್ಯಾಸ.

—ಸುಷ್ಮಾ ಸದಾಶಿವ್, ಪುತ್ತೂರು.



## ಕಣ್ಮನ ಸೆಳೆವ ಹಣ್ಣುಕಾಯಿ ಬುಟ್ಟಿ

ಬಿದಿರಿನಿಂದ ಮಾಡಿದ ಬಾತುಕೋಳಿಯನ್ನು ಹೋಲುವ ಈ ಹಣ್ಣುಕಾಯಿಯ ಬುಟ್ಟಿ ದೇವಸ್ಥಾನದಲ್ಲಿ ಎಲ್ಲರನ್ನೂ ಆಕರ್ಷಿಸಿತು. ಬುಟ್ಟಿಯನ್ನು ಹಿಡಿದುಕೊಳ್ಳಲು ಹಿಡಿಕೆಯಿದೆ ಮತ್ತು ಬುಟ್ಟಿ ಸರಿಯಾಗಿ ನಿಲ್ಲುವುದಕ್ಕಾಗಿ ಮಣೆಯೂ ಇದೆ. ಬಾತುಕೋಳಿಯ ಕೊಕ್ಕು ಮತ್ತು ಪುಕ್ಕ ಅದ್ಭುತವಾಗಿ ಮೂಡಿಬಂದಿದೆ. ಇದನ್ನು ಶ್ರಮವಹಿಸಿ ಹೆಣೆದ ಕಲಾವಿದನಿಗೊಂದು ಧನ್ಯವಾದ.

—ಪೂರ್ಣಿಮಾ ಆಗುಂಬೆ, ಬೆಂಗಳೂರು

